ರಾಜ್ಯದಲ್ಲಿನ ಅಂಗನವಾಡಿಗಳ ಬಗ್ಗೆ

33 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗನವಾಡಿಗಳ ಒಟ್ಟು ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಅಂಗನವಾಡಿಗಳ ನಿರ್ವಹಣೆಗಾಗಿ ಖರ್ಚಾಗುತ್ತಿರುವ ಒಟ್ಟು ಮೊತ್ತವೆಷ್ಟು?

ಇ) ರಾಜ್ಯದಲ್ಲಿ ಅಂಗನವಾಡಿಗಳು ಇಲ್ಲದ ಗ್ರಾಮಗಳ ಒಟ್ಟು ಸಂಖ್ಯೆ ಎಷ್ಟು ಹಾಗೂ ಅವುಗಳಿಗೆ ಯಾವಾಗ ಹೊಸ ಅಂಗನವಾಡಿಗಳನ್ನು ಮಂಜೂರು ಮಾಡಲಾಗುವುದು?

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿರುವ ಅಂಗನವಾಡಿಗಳ ಒಟ್ಟು ಸಂಖ್ಯೆ : 30,909

ಜಿಲ್ಲಾವಾರು ಅಂಗನವಾಡಿ ಕೇಂದ್ರಗಳ ಮಾಹಿತಿಯನ್ನು ಅನುಬಂಧ - 1ರಲ್ಲಿ ಒದಗಿಸಿದೆ.

ಆ) ಪ್ರಸಕ್ತ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿರುವ 166 ಯೋಜನೆಗಳ 30909 ಅಂಗನವಾಡಿ ಕೇಂದ್ರಗಳಿಗಾಗಿ ರೂ. 3961.10 ಲಕ್ಷ ಹಣ ನಿರ್ವಹಣಾ ವೆಚ್ಚಕ್ಕೆಂದು ಆಯವ್ಯಯ ನಿಗಧಿ ಪಡಿಸಲಾಗಿತ್ತು.

ಇ) ರಾಜ್ಯದಲ್ಲಿ ಅಂಗನವಾಡಿಗಳಿಲ್ಲದ ಒಟ್ಟು ಗ್ರಾಮಗಳ ಸಂಖ್ಯೆ : 3325. ಈ ಗ್ರಾಮಗಳಿಗೆ ಅಂಗನವಾಡಿ ಮಂಜೂರಾತಿಯ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದ್ದು ಮಂಜೂರಾದ ನಂತರ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು.

ಅನುಬಂಧ - 1

	ಅಂಗನವಾಡಿ ಕೇಂದ್ರಗಳ ಜಿಲ್ಲಾವಾರು ಮಾಹಿತಿ	
1)	ಬೆಂಗಳೂರು ನಗರ	901
2)	ಬೆಂಗಳೂರು (ಗ್ರಾ)	1361
3)	ಬೆಳಗಾಂ	1939
4)	ಬಳ್ಳಾರಿ	1408
5)	ಬೀದರ್	888
6)	ದಾವಣಗೆರೆ (ಚಿತ್ರದುರ್ಗ)	1600
7)	ಧಾರವಾಡ	2601
8)	ಬಿಜಾಪುರ	2006
9)	ಗುಲ್ಬರ್ಗಾ	1855
10)	ಹಾಸನ	1349
11)	ಮೈಸೂರು	2306
12)	ಶಿವಮೊಗ್ಗ	1544
13)	ರಾಯಚೂರು	2003
14)	ಚಿಕ್ಕಮಗಳೂರು	1007

15)	ದಕ್ಷಿಣ ಕನ್ನಡ	2147
16)	ಕೊಡಗು	584
17)	ಕೋಲಾರ	2082
18)	ಮಂಡ್ಯ	899
19)	ತುಮಕೂರು	1829
20)	ಉತ್ತರಕನ್ನಡ	600
	ಒಟ್ಟು	30909

ಆಶ್ರಯ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣ

37 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯಡಿ 1991ರಿಂದ 1994ರ ಡಿಸೆಂಬರ್ ವರೆವಿಗೆ ರಾಜ್ಯದಲ್ಲಿ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು?

ಆ) ಈ ಯೋಜನೆಗೆ ನಿಗಧಿ ಪಡಿಸಿದ ಹಣವೆಷ್ಟು? ಹಾಗೂ ಖರ್ಚು ಮಾಡಿರುವ ಹಣವೆಷ್ಟು?

ಇ) ಈ ವರೆವಿಗೆ ಪೂರ್ಣಗೊಂಡಿರುವ ಮನೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಆಶ್ರಯ ಯೋಜನೆಯಡಿ 1991ರಿಂದ 1994ರ ವರೆವಿಗೆ ರಾಜ್ಯದಲ್ಲಿ ಕಟ್ಟಿರುವ ಮನೆಗಳ ಸಂಖ್ಯೆ 76,243

ಆ)

	ನಿಗದಿ ಪಡಿಸಿದ ಹಣ (ರೂ. ಲಕ್ಷಗಳಲ್ಲಿ)	ಖರ್ಚು ಮಾಡಿರುವ ಹಣ
1991-92	1500.00	-
1992-93	4450.00	-
1993-94	15155.00	5718.06
1994-95	7098.54	5104.83

ಇ) ಈ ವರೆಗೆ ಪೂರ್ಣಗೊಂಡಿರುವ ಮನೆಗಳು 77,853

(ವಿವರವನ್ನು ಅನುಬಂಧ 'ಅ' ನಲ್ಲಿ ನೋಡುವುದು)

ಅನುಬಂಧ - ಅ

ಪೂರ್ಣಗೊಂಡಿರುವ ಮನೆಗಳ ವಿವರ

	ಜಿಲ್ಲೆಯ ಹೆಸರು	ಪೂರ್ಣಗೊಂಡಿರುವ ಮನೆಗಳು
1.	ಬೆಂಗಳೂರು ಗ್ರಾ	3079
2.	ಬೆಂಗಳೂರು ನಗರ	1907
3.	ಚಿತ್ರದುರ್ಗ	3841
4.	ಕೋಲಾರ	3714